ದಿ: 05.08.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಎಚ್. ಎ. ಸಿ. ವಕೀಲರಿಂದ:-**

9. ಸರ್ವೆ ನಂ.165/2ರ ಜಮೀನಿನಲ್ಲಿ 7 ಗುಂಟೆ ಜಮೀನು ಇತ್ತು ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿರುತ್ತೇನೆ. ಸದರಿ ಸ್ವತ್ತಿನ ಚೆಕ್ಕುಬಂದಿಯನ್ನು ರುಜುವಾತು ಪಡಿಸಲು ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆ ಹಾಜರುಪಡಿಸಿರುತ್ತೇನೇಯೇ ಇಲ್ಲವೇ ನನಗೆ ತಿಳಿದಿಲ್ಲ. ದಾವಾ ಸ್ವತ್ತು 30 ಗುಂಟೆ ಇರುತ್ತದೆ.

10. ಸದರಿ ಓ.ಎಸ್.306/1994ರ ದಾವೆಯಲ್ಲಿ ರಾಜಿಯಾದ ಸಮಯ ಒಟ್ಟು ಎಷ್ಟು ಜಮೀನನ್ನು ಪಾಲು ಮಾಡಿಕೊಂಡಿರುತ್ತೇವೆ ಎಂದು ನನಗೆ ತಿಳಿದಿಲ್ಲ. ಸದರಿ ರಾಜಿಯಂತೆ ಸರ್ವೆ ನಂ.165/2ರ ಸ್ವತ್ತಿನಲ್ಲಿ ಯಾರು ಯಾರಿಗೆ ಎಷ್ಟು ಜಮೀನು ಹೋಗಿರುತ್ತದೆ ಎಂದರೆ ಸಾಕ್ಷಿ 7 ಗುಂಟೆ ಜಮೀನು ನನಗೆ ಬಂದಿದ್ದು ನನ್ನ ದೊಡ್ಡಪ್ಪ ಸಿದ್ದರಾಮಣ್ಣರವರಿಗೆ 17 ಗುಂಟೆ, ಹಾಗೂ ಶಿವಣ್ಣರವರಿಗೆ 7 ಗುಂಟೆ ಜಮೀನು ಹೋಗಿರುತ್ತದೆ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು, ಸದರಿ ಸ್ವತ್ತಿನ ಉಳಿಕೆ 6 ಗುಂಟೆ ಜಮೀನನ್ನು ಸದರಿ ಸಿದ್ಧರಾಮಣ್ಣರವರೇ ಇಟ್ಟುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಸಿದ್ಧರಾಮಣ್ಣನವರು ಸುಮಾರು 25-30 ವರ್ಷಗಳ ಹಿಂದೆ ಮರಣ ಹೊಂದಿರುತ್ತಾರೆ. ಸದರಿ ಓ.ಎಸ್.306/1994ರ ದಾವೆಯನ್ನು ರಾಜಿ ಮಾಡಿಕೊಂಡಿದ್ದ ಸಮಯ ಆತ ಮೃತ ಪಟ್ಟಿದ್ದನು. ಯಾವ ಆಧಾರದಲ್ಲಿ ಸದರಿ ಸಿದ್ಧರಾಮಣ್ಣರವರಿಗೆ ಪಾಲು ನೀಡಿರುತ್ತೇವೆ ಎಂದರೆ ಸಾಕ್ಷಿ ನನಗೆ ತಿಳಿದಿಲ್ಲ ಎಂದು ನುಡಿಯುತ್ತಾರೆ. ಸದರಿ ರಾಜಿಯಲ್ಲಿ ನಂಜರಾಜಯ್ಯನ ಪಾಲಿಗೆ ಸರ್ವೆ ನಂ.165/2 ಹಾಗೂ 166/3ರ ಸ್ವತ್ತಿನಲ್ಲಿ ಒಟ್ಟು 17 ಗುಂಟೆ ಜಮೀನು ನೀಡಿರುತ್ತೇವೆ ಎಂದು ನಿ.ಪಿ.11 ರಾಜಿ ಪತ್ರದಲ್ಲಿ ನಮೂದು ಇರುತ್ತದೆ ಎಂದರೆ ಸರಿ. ಆ ಪೈಕಿ ಸರ್ವೆ ನಂ.165/2ರಲ್ಲಿ ಆತನಿಗೆ ಎಷ್ಟು ಜಮೀನನ್ನು ನೀಡಲಾಗಿದ ಎಂದರೆ ಸಾಕ್ಷಿ 17 ಗುಂಟೆಯಲ್ಲಿ ಅರ್ಧ ಸ್ವತ್ತನ್ನು ಸದರಿ ಸರ್ವೆ ನಂಬರಿನಲ್ಲಿ ನೀಡಲಾಗಿದೆ ಎಂದು ನುಡಿಯುತ್ತಾರೆ, ಸಾಕ್ಷಿ ಮುಂದುವರೆದು ನನಗೆ ತಿಳಿದಿಲ್ಲ ಎಂದು ನುಡಿಯುತ್ತಾರೆ. ಸದರಿ ರಾಜಿ ಪತ್ರದಲ್ಲಿ ಸರ್ವೆ ನಂ.165/2ರ ಸ್ವತ್ತಿಗೆ ಚೆಕ್ಕುಬಂದಿಯನ್ನು ನಮೂದಿಸಿರುತ್ತಾರೆಯೇ ಇಲ್ಲವೇ ನನಗೆ ತಿಳಿದಿಲ್ಲ. ಸದರಿ 17 ಗುಂಟೆ ಸ್ವತ್ತಿಗೆ ಚೆಕ್ಕುಬಂದಿ ಪೂರ್ವಕ್ಕೆ ಎಚ್.ಪಿ.ನಂಜುಂಡಪ್ಪರವರ ಸ್ವತ್ತು, ಪಶ್ಚಿಮಕ್ಕೆ ಬಿ ಷೆಡ್ಯೂಲ್ ಸ್ವತ್ತು, ಉತ್ತರಕ್ಕೆ ಬಿ

ಮತ್ತು ಡಿ ಷೆಡ್ಯೂಲ್ ಸ್ವತ್ತು ಹಾಗೂ ದಕ್ಷಿಣಕ್ಕೆ ಸಿ ಷೆಡ್ಯೂಲ್ ಸ್ವತ್ತು ಎಂದು ನಿ.ಪಿ.11ರಲ್ಲಿ ನಮೂದು ಇರುತ್ತದೆ ಎಂದರೆ ಸರಿ. ಸದರಿ ಮೇಲೆ ಹೇಳಿದ ಚೆಕ್ಕುಬಂದಿ ಸರ್ವೆ ನಂ.165/1ರ ಜಮೀನಿಗೆ ಸಂಬಂಧಿಸಿದ್ದು.

**ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದರಿಂದ ವಾಟೀ ಸವಾಲು ಮುಂದೂಡಲಾಯಿತು.**

*(ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)*

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.**

**(ಟಿ. ಶ್ರೀಕಾಂತ್)**
**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಆನೇಕಲ್.**